ಶ್ರೀ ರಾಮಕೃಷ್ಣ ಹೆಗಡೆ.—ನಿಮಗೆ ಏನಾದರೂ ಸಂದೇಹ ಇದ್ದರೆ ಆಮೇಲೆ ಪ್ರಶ್ನೆ ಕೇಳಿದರೆ ಹೇಳಬಹುದು. ಮಾತನಾಡುವಾಗ ನಮ್ಮ ತಲೆಯಲ್ಲಿ ಏನೋ ವಿಚಾರಗಳು ಬರುತ್ತವೆ, ಮಧ್ಯೆ ಬಾಯಿ ಹಾಕಿದರೆ ಹೊರಟು ಹೋಗುತ್ತದೆ. ಆಮೇಲೆ ನಾನು ಅಲ್ಲಿಗೆ ಹೋಗಬೇಕಾಗಿತ್ತು ಎಂದೂ ಹೇಳಿದರು. ನಾನು ಸ್ವತಃ ಹೋಗಲಿಕ್ಕೆ ಆಕ್ಷೇಪ ಇಲ್ಲ, ಇವತ್ತು ಬೆಳಿಗ್ಗೆ ನಮ್ಮ ಕೊಲೀಗ್ಸನ್ನು ಕಳಿಸಿಕೊಟ್ಟಿದ್ದೇನೆ, ಅವರು ಬಂದು ಇನ್ನೂ ಪರಿಸ್ಥಿತಿ ಸಂಧಾರಿಸಿಲ್ಲ, ನೀವು ಹೋದರೆ ಒಳ್ಳೆಯದೂ ಎಂದು ಹೇಳಿದರೆ ನಾನು ಸ್ವತಃ ಹೋಗುತ್ತೇನೆ. ಘಟನೆಯಾದ ತಕ್ಷಣ ಎಲ್ಲಾ ಕಡೆಗೂ ಮುಖ್ಯಮಂತ್ರಿ, ಹೋಗಲಿಕ್ಕೆ ಸಾಧ್ಯವಾಗುವುದಿಲ್ಲ. ಮೂರನೇ ವಿಚಾರವೆಂದರೆ, ಮಾನ್ಯ ಖಾರ್ಗೆಯವರು ಶ್ರೀಮತಿ ನಾಗರತ್ನಮ್ಮನವರು ಆಸ್ಪತ್ರೆಯಲ್ಲಿದ್ದಂತಹವರಿಗೆ ಏನು ಪರಿಹಾರ ಕೊಡುತ್ತೀರಿ ಎಂದು ಕೇಳಿದರು. ಪರಿಹಾರ ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆ. ಯಾರು ಇದರಲ್ಲಿ ನೊಂದಿದ್ದಾರೋ ಅವರಿಗೆ ಮತ್ತು ಯಾರು ಆಸ್ಪತ್ರೆಯನ್ನು ಕಳೆದುಕೊಂಡಿದ್ದಾರೋ ಅವರಿಗೂ ಕೂಡ, ನಾವು ಕಳೆದ ಒಂದೂವರೆ ವರ್ಷದ ಹಿಂದೆ ಕಾಂಪನ್ಸೇಷನ್ ಕೊಡತಕ್ಕಂಥ ಅಮೌಂಟನ್ನು ಹೆಚ್ಚು ಮಾಡಿದ್ದೇವೆ, ಸ್ಕೇಲನ್ನು ಹೆಚ್ಚು ಮಾಡಿದ್ದೇವೆ, ಅದರ ಪ್ರಕಾರ ಕೊಡುತ್ತೇವೆ. ಆದ್ದರಿಂದ ಇದರ ಬಗ್ಗೆ ಇನ್ನು ಹೆಚ್ಚು ಚರ್ಚೆ ಬೇಕಾಗಿಲ್ಲ ಎಂದು ಅನ್ನಿಸುತ್ತದೆ,

೨) ಮೈಸೂರು ಜಿಲ್ಲೆಯ ನಂಜನಗೂಡು, ಗುಂಡ್ಲುಪೇಟೆ, ಹೆಗ್ಗಡದೇವನಕೋಟೆ ಮಂತ್ತು ಇತರ ತಾಲ್ಲೂಕುಗಳಲ್ಲಿ ರೈತರಿಗೆ ಹತ್ತಿ ಮತ್ತಿತರ ಬೀಜಗಳು ದೊರಕದೆ ತೊಂದರೆಗೆ ಒಳಗಾಗಿರುವ ಬಗ್ಗೆ ಹಾಗೂ ಬಿತ್ತನೆ ಬೀಜಗಳನ್ನು ಕಾಲಕ್ಕೆ ಸರಿಯಾಗಿ ಒದಗಿಸುವ ಬಗ್ಗೆ.—

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲೆಯಲ್ಲಿರುವ ನಂಜನಗೂಡು, ಗುಂಡ್ಲುಪೇಟೆ, ಹೆಗ್ಗಡದೇವನಕೋಟೆ ಮತ್ತು ಇತರ ತಾಲ್ಲೂಕುಗಳಲ್ಲಿ ರೈತರಿಗೆ ಹತ್ತಿ ಮತ್ತಿತರ ಬೀಜಗಳು ದೊರಕದೆ ತೊಂದರೆಗೆ ಒಳಗಾಗಿರುವ ಬಗ್ಗೆ ಹಾಗೂ ಬಿತ್ತನೆ ಬೀಜಗಳನ್ನು ಕಾಲಕ್ಕೆ ಸರಿಯಾಗಿ ಒದಗಿಸುವ ಬಗ್ಗೆ ಮಾನ್ಯ ಕೃಷಿ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ (ಮಾನ್ಯ ಕೃಷಿ ಸಚಿವರು).—ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

೧೯೮೭-೮೮ನೇ ಸಾಲಿನಲ್ಲಿ ಅತೀ ಉದ್ದ ಎಳೆಯ ಹತ್ತಿಯಾದ ಡಿ.ಸಿ.ಹೆಚ್-೩೨ ಹತ್ತಿಗೆ ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆ ಇದ್ದುದರಿಂದ ೧೯೮೮-೮೯ನೇ ಸಾಲಿನಲ್ಲಿ ಅಧಿಕ ಸಂಖ್ಯೆಯಲ್ಲಿ ರೈತರು ಈ ಬೆಳೆಯನ್ನು ತೆಗೆದ ಕೊಳ್ಳಲು ಮುಂದೆ ಬಂದಿರುತ್ತಾರೆ. ಈ ಕಾರಣದಿಂದ ನಿರೀಕ್ಷಿಸಿದ ಬೇಡಿಕೆಗಿಂತ ಹೆಚ್ಚಿನ ಬೇಡಿಕೆ ಈ ತಳಿಯ ಹತ್ತಿ ಬೀಜಕ್ಕೆ ಈ ಸದರಿ ಸಾಲಿನಲ್ಲಿರುತ್ತದೆ.

ಈ ಹಿಂದಿನ ಸಾಲಿನಲ್ಲಿದ್ದ ಬೇಡಿಕೆ ಮತ್ತು ಪೂರಾಟವಾದ ಪ್ರಮಾಣವನ್ನು ಗಣನೆಗೆ ತೆಗೆದುಕೊಂಡು ೧೯೮೮-೮೯ನೇ ಸಾಲಿನಲ್ಲಿ ಸರಬರಾಜು ಮಾಡಲು ಕರ್ನಾಟಕ ರಾಜ್ಯ ಬೀಜ ನಿಗಮವು ಒಟ್ಟು ೨,೨೬೦ ಕ್ವಿಂಟಾಲ್‌ನಷ್ಟು ಪ್ರಮಾಣಿತ ಡಿ.ಸಿ.ಹೆಚ್-೩೨ ಹತ್ತಿ ಬೀಜವನ್ನು ೧೯೮೭-೮೮ರಲ್ಲಿ ಉತ್ಪಾದಿಸುವ ಗುರಿ ಹೊಂದಿತ್ತು. ಆದರೆ ಹವಾಮಾನದ ವೈಪರೀತ್ಯದಿಂದಾಗಿ ಮತ್ತು ಬೀಜೋತ್ಪಾದಕರು ಪೂರ್ಣ ಪ್ರಮಾಣದ ಉತ್ಪಾದನೆಯನ್ನು ಬೀಜ ನಿಗಮಕ್ಕೆ ಒಪ್ಪಿಸಿಲ್ಲವಾದ್ದರಿಂದ ೧,೬೪೮ ಕ್ವಿಂಟಾಲ್ ನಷ್ಟು ಪ್ರಮಾಣಿತ ಬೀಜ ಮಾತ್ರ ಲಭ್ಯವಾಗಿರುತ್ತದೆ. ಇದರಿಂದ ಬೀಜ ನಿಗಮವು ೧೯೮೮-೮೯ನೇ ಸಾಲಿನ ಬೇಡಿಕೆಯನ್ನು ಪೂರೈಸಲು ಸಾಧ್ಯವಾಗಿರುವುದಿಲ್ಲ. ೧೯೮೮-೮೯ನೇ ಸಾಲಿನಲ್ಲಿ ಮೈಸೂರು ಜಿಲ್ಲೆಗೆ ಕರ್ನಾಟಕ ರಾಜ್ಯ ಬೀಜ ನಿಗಮವು ೪೨೪ ಕ್ವಿಂಟಾಲ್‌ನಷ್ಟು ಡಿ.ಸಿ.ಹೆಚ್-೩೨ ಮತ್ತು ೨೫.೦೦ ಕ್ವಿಂಟಾಲ್‌ನಷ್ಟು ವರಲಕ್ಷ್ಮಿ ಹತ್ತಿ ಬೀಜವನ್ನು ಆಸುಗೆ ಮಾಡಿರುತ್ತದೆ.

ರಾಜ್ಯದಲ್ಲಿ ಹತ್ತಿ ಬೀಜದ ಉತ್ಪಾದನೆಯ ಕೊರತೆ ಇದ್ದ ಮೂಲಕ ಪ್ರಮಾಣಿತ ಹತ್ತಿ ಬೀಜವನ್ನು ನೆರೆ ರಾಜ್ಯದ ಬೀಜ ನಿಗಮಗಳಿಂದ ತರುವ ವ್ಯವಸ್ಥೆ ಮಾಡಲಾಗಿದೆ ಮತ್ತು ಖಾಸಗಿ ಸಂಸ್ಥೆಗಳಿಗೂ ಸಹ ಪ್ರಮಾಣಿತ ಬೀಜ ತರಲು ಅನುಮತಿ ಕೊಡಲಾಗಿದೆ.

ಶ್ರೀ ಡಿ.ಟಿ. ಜಯಕುಮಾರ್. ಮಾನ್ಯ ಅಧ್ಯಕ್ಷರೇ, ಈ ಸಾರಿ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಕಡೆ ಮುಂಗಾರು ಮಳೆ ಬಂದು, ರೈತರು ಸಂತಸದಿಂದ ಬೇಸಾಯ ಮಾಡಲಿಕ್ಕೆ ಆಣಿಯಾಗುತ್ತಿದ್ದಾರೆ. ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ತಾಲ್ಲೂಕು ಹಾಗೂ ಇತರೇ ತಾಲ್ಲೂಕುಗಳಲ್ಲಿ ಹತ್ತಿಯನ್ನು ರೈತರು ಬೆಳೆಯುತ್ತಾರೆ. ಆದರೆ, ಹತ್ತಿ ಬೀಜದ ಬಗ್ಗೆ ಯಾವ ತಾಲ್ಲೂಕಿಗೆ ಹೋಗಿ ಕೇಳಿದರೂ ಸಾಕಷ್ಟು ಬೀಜ ಸಿಗುತ್ತಿಲ್ಲ. ಬೀಜಗಳ ಸರಬರಾಜಿನಲ್ಲಿ ಆದಂತಹ ವ್ಯವಹಾರ ಯಾವ ಮಟ್ಟಕ್ಕೆ ಹೋಗಿದೆ ಎಂದರೆ, ಪೋಲೀಸಿನವರು ಲಾರಿ ಚಾರ್ಜ್ ಮಾಡುವ ಮಟ್ಟಕ್ಕೆ ಹೋಗಿದೆ. ನಮ್ಮ ತಾಲ್ಲೂಕಿಗೆ ೧೪೦–೧೫೦ ಕ್ವಿಂಟಾಲ್ ಬೇಡಿಕೆ ಇದ್ದರೆ, ಕೇವಲ ೪೦ ಕ್ವಿಂಟಾಲ್‌ನ್ನು ಕಳುಹಿಸಿದ್ದಾರೆ. ಚಿಂತಾಜನಕವಾದ ವಿಚಾರ ಏನೆಂದರೆ, ಕಳೆದ ಸಾರಿ ಕೂಡ ಇದೇರೀತಿಯ ಬೇಡಿಕೆ ಇದ್ದರೂ ಕೂಡ ಉತ್ತಮವಾದ ಬೀಜಗಳನ್ನು ಕೊಡದೆ, ಕಲಬೆರಕೆಯಾಗಿರುವ ಬೀಜಗಳನ್ನೇ ಇಲಾಖೆಯವರು ಹಾಗೂ ಖಾಸಗೀಯವರು ಕೊಟ್ಟಿದ್ದಾರೆ. ರೈತರ ಗೋಳನ್ನು ಯಾರು ಕೂಡ ಕೇಳುತ್ತಿಲ್ಲ. ರೈತರು ಕಷ್ಟಪಟ್ಟು ಉತ್ತಂ ಬೀಜವನ್ನು ಬಿತ್ತಿ, ಬೆಳೆ ಕೈಗೆ ಬಾರದೇ ಹೋದರೆ, ಅವನ ಪರಿಸ್ಥಿತಿ ಹೇಳುವುದಕ್ಕಾಗುವುದಿಲ್ಲ. ರೈತರ ಶಾಪವನ್ನು ಯಾವ ದೇವರೂ ಕೂಡ ಕ್ಷಮಿಸುವುದಿಲ್ಲ. ನಮ್ಮ ರಾಜ್ಯದಲ್ಲಿ ಬೀಜ ನಿಗಮ ಇದೆ. ಈ ಸಂಸ್ಥೆಯಲ್ಲಿ ಇರತಕ್ಕ ಅಧಿಕಾರಿ ಲಿಂಗರಾಜ್ ಅರಸ್ ಎನ್ನುವವರು ದಕ್ಷರಾದಂಥ ಮತ್ತು ಪ್ರಾಮಾಣಿಕ ಅಧಿಕಾರಿ. ಇಂಥ ಅಧಿಕಾರಿ ಇದ್ದರೂ ರೈತರಿಗೆ ಸಕಾಲದಲ್ಲಿ ಉತ್ತಮವಾದಂಥ ಬೀಜ ಸಿಗದೇ ಶೋಚನೆಯ. ಡಿ.ಸಿ.ಹೆಚ್. ೩೨, ವರಲಕ್ಷ್ಮಿ, ಸೂರ್ಯಕಾಂತಿ ಬೀಜ ಕೂಡ ಸಿಗಲಿಲ್ಲ. ಕಡಲೆಕಾಯಿ ಬೀಜ ಸಿಗಲಿಲ್ಲ. ಕಲಬೆರೆಕೆ ಬೀಜವನ್ನು ಯಾರೂ ರೈತರಿಗೆ ಸರಬರಾಜು ಮಾಡುತಾರೆ. ಅಂಥವರಿಗೆ ನೇಣು ಹಾಕಬೇಕು. ಈ ವಿಚಾರದಲ್ಲಿ ಕೃಷಿ ಸಚಿವರು ಸೂಕ್ತವಾದಂಥ ಕ್ರಮ ತೆಗೆದುಕೊಳ್ಳಬೇಕು. ಮುಂಗಾರು ಮಳೆ ಇನ್ನು ಒಂದು ಬಂದರೆ, ರೈತರಿಗೆ ಬೀಜ ಬೇಕಾಗುತ್ತದೆ ರೈತರಿಗೆ ಯಾವ ಪ್ರಮಾಣದಲ್ಲಿ ಬೇಡಿಕೆ ಇದೆಯೋ ಆ ಪ್ರಮಾಣದಲ್ಲಿ ಉತ್ತಮವಾದ ಬೀಜವನ್ನು ಸರಬರಾಜು ಮಾಡುವಂಥ ವ್ಯವಸ್ಥೆಯನ್ನು ಕೂಡಲೇ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.— ಮಾನ್ಯ ಅಧ್ಯಕ್ಷರೆ. ಮುಂಗಾರು ಮಳೆ ಬರುವಂಥ ಸಂದರ್ಭದಲ್ಲಿ ನಮ್ಮ ಮೈಸೂರು ಜಿಲ್ಲೆಯಲ್ಲಿ ರೈತ ವ್ಯವಸಾಯಕ್ಕೆ ಸಿದ್ಧನಾಗುತ್ತಾನೆ.

ಅಧ್ಯಕ್ಷರು.— ಉತ್ತರ ಹೇಳಿದ್ದಾರೆ. ಆದರ ಮೇಲೆ ವಿವರಣೆ ಕೇಳಿ.

ಶ್ರೀ ವೇದಾಂತ ಹೆಮ್ಮಿಗೆ.— ಮೈಸೂರು ಜಿಲ್ಲೆಯಲ್ಲಿ ವ್ಯವಸಾಯಕ್ಕೆ ಸಂಬಂಧಪಟ್ಟ ಇಲಾಖೆ ಇದೆ. ಇಲಾಖೆಯವರು ಸರ್ವೆ ಮಾಡಿ, ಯಾವ ಯಾವ ತಾಲ್ಲೂಕಿನಲ್ಲಿ ಯಾವ ಯಾವ ಬೀಜಗಳು ಬೇಕು. ಯಾವ ಪ್ರಮಾಣದಲ್ಲಿ ಬೇಕು ಎಂಬ ಬಗ್ಗೆ ೨–೩ ತಿಂಗಳು ಮುಂಚಿತವಾಗಿ ಸರ್ವೆ ಮಾಡ ಬೇಕಾಗಿತ್ತು. ಅಧಿಕಾರಿಗಳು ಏತಕ್ಕೆ ಆ ಕೆಲಸವನ್ನು ಮಾಡಲಿಲ್ಲ. ಮಳೆ ಬಂದಾಗ, ಹದ ಇದ್ದಾಗ ಬಿತ್ತನೆ ಮಾಡಿದರೆ, ರೈತರಿಗೆ ಬೆಳೆ ಸರಿಯಾಗಿ ಕೈಗೆ ಬರುತ್ತದೆ. ಇಲ್ಲದಿದ್ದರೆ ರೈತರು ತೊಂದರೆಗೆ ಗುರಿಯಾಗುತ್ತಾರೆ ಅರ್ಧ ಫಸಲು ಕೂಡ ರೈತರ ಕೈಗೆ ಬರುವುದಿಲ್ಲ. ಸರ್ವೆ ಕಾರ್ಯವನ್ನು ಅಧಿಕಾರಿಗಳು ಏತಕ್ಕೆ ಮಾಡಲಿಲ್ಲ ಎಂಬ ಬಗ್ಗೆ ಮಾನ್ಯ ಮಂತ್ರಿಯವರು ಸ್ಪಷ್ಟೀಕರಣ ಕೊಡಬೇಕು.

ಶ್ರೀ ಆರ್.ವಿ. ದೇಶಪಾಂಡೆ.— ಅಧ್ಯಕ್ಷರೆ, ಇಲಾಖೆಗಳ ಬೇಡಿಕೆಗಳ ಮೇಲೆ ಉತ್ತರ ಕೊಡುವಾಗ ಸ್ಪಷ್ಟೀಕರಣಕೊಟ್ಟಿದ್ದೇನೆ. ಹತ್ತಿಯ ಬೀಜವನ್ನು ಕಿಸೆಯಿಂದ ತೆಗೆದುಕೊಂಡು ಕೊಡುವುದಕ್ಕೆ ಸಾಧ್ಯವಿಲ್ಲ. ಡಿ.ಸಿ.ಹೆಚ್. ೩೨ ಬೀಜವನ್ನು ಇವತ್ತು ರೈತರಿಗೆ ಕೊಡಬೇಕಾದರೆ, ನಾನು ಕನಿಷ್ಟ ಎರಡು ವರ್ಷ ಮುಂಚೆ ನಮ್ಮ ಬೇಡಿಕೆಯನ್ನು ಯೂನಿವರ್ಸಿಟಿಗೆ ಮೂಲ ಬೀಜದ ಬಗ್ಗೆ, ಫೌಂಡೇಷನ್ ಸೀಡ್ಸ್ ಬಗ್ಗೆ ಆರ್ಡರ್ ಕೊಡಬೇಕಾಗುತ್ತದೆ. ೮೧-೮೨ರಲ್ಲಿ ಹತ್ತು ಲಕ್ಷ ಹೆಕ್ಟೇರ್‌ನಲ್ಲಿ ಹತ್ತಿ ಉತ್ಪಾದನೆಯಾಗುತಿತ್ತು. ಪ್ರತಿ ವರ್ಷ ಕಡಿಮೆಯಾಗುತಾ ಬಂದಿದೆ. ೮೬–೮೭ರಲ್ಲಿ ಆ ನಾಲ್ಕು ಲಕ್ಷ ೯೯ ಸಾವಿರ ಹೆಕ್ಟೇರ್‌ನಲ್ಲಿ ಹತ್ತಿ ಬೆಳೆಯಲಾಗಿತ್ತು. ಕಳೆದ ವರ್ಷ ೪ ಲಕ್ಷ ಹೆಕ್ಟೇರ್‌ನಲ್ಲಿ ಬೆಳೆಯಲಾಗಿದೆ. ಕಳೆದ ವರ್ಷ ಇಡೀ ದೇಶದಲ್ಲಿ ಕೊರತೆಯಾಗಿ ಹೆಚ್ಚು ಡಿಮ್ಯಾಂಡ್ ಬಂದ ನಂತರ ಈ ವರ್ಷ ಹತ್ತಿ ಬೀಜವನ್ನು ರೈತರು ಕೇಳುತ್ತಿದ್ದಾರೆ. ಸರ್ಕಾರಕ್ಕೆ ರೈತರಿಗೆ ಬೀಜ ಪೂರೈಸುವ ಇಚ್ಛೆ ಇದೆ. ಮೈಸೂರು ಜಿಲ್ಲೆಯಲ್ಲಿ ಕಳೆದ ವರ್ಷ ೭೮ ಕ್ವಿಂಟಾಲ್ ಬೀಜವನ್ನು ಮಾರಾಟ ಮಾಡಿದ್ದೆವು. ಈ ವರ್ಷ ೪೨–೪೫ ಮತ್ತು ಖಾಸಗೀಯವರಿಂದ ೨೫ ಕ್ವಿಂಟಾಲ್ ಬೀಜವನ್ನು ಡಿಸ್ಟ್ರಿಬ್ಯೂಷನ್ ಮಾಡಲಾಗಿದೆ. ಹೆಚ್ಚಿನ ಡಿಮ್ಯಾಂಡ್ ಬಂದಿರುವುದರಿಂದ ಗುಜರಾತ್ ಮತ್ತು ಮಹಾರಾಷ್ಟ್ರ ಬೀಜ ನಿಗಮಗಳಿಂದ ಬೀಜಗಳನ್ನು ಕೊಳ್ಳಲಾಗಿದೆ. ಸರ್ಟಿಫೈಡ್ ಬೀಜವನ್ನು ತರಲಿಕ್ಕೆ ನಾವು ವರವಾನಗಿ

ಕೊಟ್ಟಿದ್ದೇವೆ. ಮಾನ್ಯ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಕೆಲವು ಕಡೆ ರೈತರಿಗೆ ಹತ್ತಿ ಬೀಜ ಸಿಗುವುದಿಲ್ಲ ಎನ್ನುವ ಸಂಶಯ ಬಂದಿದೆ. ಎಷ್ಟು ಸಾಧ್ಯವೋ ಅಷ್ಟು ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ. ಈ ಹತ್ತಿ ಬೀಜದ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸಾಧ್ಯವಾಗಬಹುದು ಎನ್ನುವ ವಿಶ್ವಾಸ ನನಗೆ ಇದೆ.

ಅಧ್ಯಕ್ಷರು.— ಮಾನ್ಯ ವೆಂಕಟರಾಮಯ್ಯನವರೇ, ಕಾಲಿಂಗ್ ಅಟೆನ್‌ಷನ್ ಕೇಳಿ.

ಶ್ರೀ ಡಿ. ಟಿ. ಜಯಕೂಮಾರ್.— ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ.

ಅಧ್ಯಕ್ಷರು.— ಮಂತ್ರಿಗಳು ಸಮರ್ಪಕವಾಗಿ, ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರೆ. ಈಗ ನಿಮಗೆ ನಾನು ಅವಕಾಶ ಕೊಡುವುದಿಲ್ಲ.

ಶ್ರೀ ಡಿ.ಟಿ. ಜಯಕುಮಾರ್.— ರೈತರ ಬಗ್ಗೆ ಇಷ್ಟೊಂದು ನಿರಾಕರಣೆ ಮಾಡಿದರೆ ಹೇಗೆ?

ಅಧ್ಯಕ್ಷರು.— ಆಗುವುದಿಲ್ಲ.

ಶ್ರೀ ಡಿ.ಟಿ. ಜಯಕುಮಾರ್.— ನೀವೂ ಕೂಡ ರೈತರು ಅನುಭವವಿದೆ.

ಅಧ್ಯಕ್ಷರು.— ನಿಮಗಿಂತ ನನಗೆ ಹೆಚ್ಚು ಗೊತ್ತಿದೆ. ಮಂತ್ರಿಗಳು ಸ್ಪಷ್ಟವಾಗಿ ಸಮರ್ಪಕವಾಗಿ ಉತ್ತರ ಕೊಟ್ಟಿದ್ದಾರೆ.

ಶ್ರೀ ಡಿ. ಟಿ. ಜಯಕುಮಾರ್.— ಅವರಿಗೆ ಅಂದರೆ ಆಪೊಸಿಷನ್‌ನವರಿಗೆ ಒಂದೊಂದು ಗಂಟೆ ಕೊಡುತ್ತೀರಿ ಒಂದೊಂದು ಕ್ವೆಶ್ಚನ್‌ಗೆ.

ಅಧ್ಯಕ್ಷರು.— ಈ ರೀತಿ ಬೇಜವಾಬ್ದಾರಿಯಿಂದ ಮಾತನಾಡಬೇಡಿ. ಅವರು ಇವರು ಎಂದರ ಹೇಳಬೇಡಿ, ನನಗೆ ಎಲ್ಲರೂ ಒಂದೇ. ಈ ರೀತಿ ಮಾತನಾಡಬೇಡಿ.

ಶ್ರೀ ಡಿ.ಟಿ. ಜಯಕುಮಾರ್.— ಅವರಿಗೆ ಕೊಟ್ಟಿದ್ದೀರಿ. ಇವರಿಗೆ ಕೊಟ್ಟಿದ್ದೀರಿ

ಅಧ್ಯಕ್ಷರು.— ಯಾರಿಗೂ ಕೊಟ್ಟಿಲ್ಲ. ಕುಳಿತುಕೊಳ್ಳಿ. ಮಾನ್ಯ ವೆಂಕಟರಾಮಯ್ಯನವರೆ ನೀವು ಕೇಳಿ.

ನಿಯಮ ೩೩ಳಿರ ಮೇರೆಗೆ

೧. ಕೆ. ಪಿ. ಎಸ್. ಸಿ. ಯಿಂದ ನಡೆದ ದರ್ಜೆ ೧ ಮತ್ತು ೨ರ ಪರೀಕ್ಷಾ ಪ್ರಶ್ನೆ ಪತ್ರಿಕೆಗಳು ಬಹಿರಂಗವಾಗಿರುವುದರ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಕೆ.ಪಿ.ಎಸ್.ಸಿ. ಇತ್ತೀಚೆಗೆ ನಡೆಸಿದ ಕ್ಲಾಸ್ ಒಂದು ಮತ್ತು ಎರಡರ ಪ್ರಶ್ನೆ ಪತ್ರಿಕೆಗಳು ಬಹಿರಂಗವಾದ ವಿಚಾರ ದಿನ ಪತ್ರಿಕೆಗಳಲ್ಲಿ ಬಂದಿದ್ದದನ್ನು ಸ್ಮರಿಸುತ್ತಾ ಆ ರೀತಿಯಲ್ಲಿ ಬಹಿರಂಗವಾದ ಪ್ರಶ್ನೆ ಪತ್ರಿಕೆಗಳಿಗೆ ಉತ್ತರ ಬರೆದು ಪರೀಕ್ಷೆಯಲ್ಲಿ ಪಾಸಾಗಿ ಉನ್ನತ ಅಧಿಕಾರಕ್ಕೆ ಬರುವ ಅಧಿಕಾರಿಗಳಿಂದ ಸರ್ಕಾರ ಎಂತಹ ಸೇವೆಯನ್ನು ನಿರೀಕ್ಷಿಸಬಹುದು ಹಾಗೂ ಕ್ರಮವಾಗಿ ನ್ಯಾಯಬದ್ಧವಾಗಿ ಓದಿ ಬರೆದಿರುವವರಿಗೆ ಅನ್ಯಾಯವಾಗಿದೆ ಕಳಪೆ ಅಧಿಕಾರಿಗಳು ಸೇವೆಗೆ ಬರುವುದರಿಂದ ರಾಜ್ಯದ ಆಡಳಿತ ಕೆಟ್ಟು ಹೋಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಆದುದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಕೆ.ಪಿ.ಎಸ್.ಸಿ. ನಡೆಸಿದ ಪರೀಕ್ಷೆಯನ್ನು ರದ್ದುಪಡಿಸಿ ಮರು ಪರೀಕ್ಷೆ ನಡೆಸುವುದು ಸೂಕ್ತವಾದ್ದರಿಂದ ಇದು ಸಾರ್ವಜನಿಕ ಹಿತದೃಷ್ಟಿಯಿಂದ ತುರ್ತು ವಿಷಯವಾದ್ದರಿಂದ ಸದನದ ಪಂಚಂಡೆ ಚರ್ಚೆಗೆ ತರಬಯಸುತ್ತೇನೆ.

ಶ್ರೀ ಜೀವರಾಜ ಆಳ್ವ.— ಮಾನ್ಯ ಸದಸ್ಯರು ಈ ವಿಷಯದ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದಾರೆ. ಇದರ ಬಗ್ಗೆ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.— ಸ್ಟೇಟ್‌ಮೆಂಟ್ ಕೊಡಿ. ಈ ವಿಷಯಕ್ಕೂ ಜೀವರಾಜ ಆಳ್ವರವರಿಗೂ ಸಂಬಂಧವಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲೇ ಇದ್ದಾರೆ ಅವರು ಹೇಳಲಿ.